









ನಂತರ ಸಾರ್ವಜನಿಕರ ನೆರವಿನಿಂದ 1987ರಲ್ಲಿ ಪ್ರಾರಂಭಗೊಂಡಿತು. ಆರ್ಕಿಟೆಕ್ಟ್‌ಗಳು, ಪ್ಲಾನರ್‌ಗಳ ಜೊತೆಗೆ ಅನೇಕ ಕೆಲಸಗಾರರು ಸಹ ಉಚಿತವಾಗಿ ಸೇವೆ ಸಲ್ಲಿಸಿ, ಶ್ರಮದಾನ ಮಾಡಿ ಸರ್ಕಾರದ ನೆರವಿಲ್ಲದೇ ಈ ಸ್ಮಾರಕವನ್ನು ನಿರ್ಮಿಸಿದ್ದಾರೆ.

ಕೆಳಗಿನಿಂದ ಸ್ವಲ್ಪ ಮೇಲಕ್ಕೇರುವ ಸುರುಳಿಯಾಕಾರದ ನಡಿಗೆ ದಾರಿ ಹುಟ್ಟು, ಸಾವು ಹಾಗೂ ಮರು ಹುಟ್ಟುಗಳನ್ನು ಸಂಕೇತಿಸುತ್ತದಂತೆ. ಹಸಿರು ಹುಲ್ಲು ಹಾಸಿನ ಸುತ್ತಲೂ ಗ್ರಾನೈಟ್ ಕಲ್ಲಿನ ಸ್ಮಾರಕಗಳಲ್ಲಿ ಸುಮಾರು 800 ಮೃತ ಯೋಧರ ಹೆಸರುಗಳನ್ನು ಕೆತ್ತಲಾಗಿದೆ. ಜೊತೆಗೆ ಒರೆಗಾನ್ ರಾಜ್ಯದಲ್ಲಿ ಆ ಸಮಯದಲ್ಲಿ ನಡೆದ ಪ್ರಮುಖ ಘಟನೆಗಳನ್ನೂ ದಾಖಲಿಸಲಾಗಿದೆ.

ಯುದ್ಧದ ಪರ ಅಥವಾ ವಿರೋಧ ನಿಲುವುಗಳೇನೂ ಇಲ್ಲದೆ, ಯೋಧರ ಗೌರವಾರ್ಥ ಸಾರ್ವಜನಿಕರೇ ನಿರ್ಮಿಸಿರುವ ವಿಶಿಷ್ಟ ಸ್ಮಾರಕ ಇದು. ಪೋರ್ಟ್‌ಲ್ಯಾಂಡ್‌ನಲ್ಲಿ ನೋಡಲೇಬೇಕಾದ ಸ್ಥಳ ಇದು. ಇಲ್ಲಿಗೆ ತಲುಪಲು ಟ್ರೈಮೆಟ್ ಬಸ್ ಸೇವೆ ಇದೆ. ಜೊತೆಗೆ ಇಲ್ಲಿ ಸುಮಾರು 260 ಅಡಿ (79 ಮೀ) ಆಳದ ಸುರಂಗದಲ್ಲಿ ಇರುವ ಲಘು ರೈಲ್ವೇ ನಿಲ್ದಾಣ ಕೂಡ ಒಂದು ಆಕರ್ಷಣೆಯೇ ಹೌದು. ಮ್ಯಾಕ್ಸ್ ಬ್ಲೂ ಲೈನ್ ಹಾಗೂ ರೆಡ್ ಲೈನ್‌ಗಳ ಸಂಪರ್ಕವಿರುವ ಈ ರೈಲ್ವೇ ನಿಲ್ದಾಣ ವಿಶ್ವದ ಅತಿ ಆಳದ ಭೂಗತ ಸುರಂಗ ನಿಲ್ದಾಣಗಳಲ್ಲಿ ಒಂದಾಗಿದೆ.